**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 18 ಡಿವಿಪಿ (1) 2015.

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು 560 001.
ದಿನಾಂಕ: 21-07-2015.

**: ಜ್ಞಾಪನ :**

**ವಿಷಯ:** ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಸೀಟುಗಳ ಹಂಚಿಕೆಯ ಮೇರೆಗೆ ವೇತನಾನುದಾನ ಪರಿಷ್ಕರಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಇಡಿ 60 ಟಿಪಿಇ 2012, ದಿನಾಂಕ 07-11-2014

2. ಈ ಕಛೇರಿ ಟಿಪ್ಪಣಿ ಸಂಖ್ಯೆ: ಡಿಟಿಇ 414 ಎಸಿಎಂ(2) 2014-15, ದಿನಾಂಕ 15-07-2015

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಸರ್ಕಾರದ ಆದೇಶ ದಿನಾಂಕ 07-11-2014 ರಲ್ಲಿ ಸರ್ಕಾರದ ಸಮಸಂಖ್ಯೆ ಆದೇಶ ದಿನಾಂಕ 16-10-2012 ರ ಆದೇಶವನ್ನು ಹೊರಡಿಸುವ ಮೊದಲು ಅಸ್ತಿತ್ವದಲ್ಲಿದ್ದ ವಿದ್ಯಾರ್ಥಿ ಪ್ರಮಾಣ ಮತ್ತು ವೇತನಾನುದಾನವನ್ನೇ ಅಂದರೆ ಶೇ. 85 ರಷ್ಟು ವೇತನಾನುದಾನವನ್ನು ಸರ್ಕಾರವು ಹಾಗೂ ಇನ್ನುಳಿದ ಶೇ. 15 ರಷ್ಟು ವೇತನಾನುದಾನವನ್ನು ಆಯಾ ಪಾಲಿಟೆಕ್ನಿಕ್‌ಗಳ ಆಡಳಿತ ಮಂಡಳಿಗಳು ಭರಿಸತಕ್ಕದ್ದು ಹಾಗೂ ಅಲ್ಪಸಂಖ್ಯಾತವಲ್ಲದ ಅನುದಾನಿತ ಸಂಸ್ಥೆಗಳ ಅನುದಾನಿತ ಕೋರ್ಸ್‌ಗಳಲ್ಲಿನ ಮಂಜೂರಾದ ಒಟ್ಟು ವಿದ್ಯಾರ್ಥಿ ಪ್ರಮಾಣದಲ್ಲಿ ಶೇ.80 ರಷ್ಟು ಸೀಟುಗಳನ್ನು ಸರ್ಕಾರಿ ಸೀಟುಗಳನ್ನಾಗಿ ಹಾಗೂ ಉಳಿದ ಶೇ. 20 ರಷ್ಟು ಸೀಟುಗಳನ್ನು ಆಡಳಿತ ಮಂಡಳಿಯ ಸೀಟುಗಳನ್ನಾಗಿ ಮತ್ತು ಅಲ್ಪಸಂಖ್ಯಾತ ಅನುದಾನಿತ ಸಂಸ್ಥೆಗಳ ಅನುದಾನಿತ ಕೋರ್ಸ್‌ಗಳಲ್ಲಿನ ಮಂಜೂರಾದ ಒಟ್ಟು ವಿದ್ಯಾರ್ಥಿ ಪ್ರಮಾಣದಲ್ಲಿ ಶೇ. 50 ರಷ್ಟು ಸೀಟುಗಳನ್ನು ಸರ್ಕಾರಿ ಸೀಟುಗಳನ್ನಾಗಿ ಹಾಗೂ ಉಳಿದ ಶೇ. 50 ರಷ್ಟು ಸೀಟುಗಳನ್ನು ಆಡಳಿತ ಮಂಡಳಿಯ ಸೀಟುಗಳನ್ನು ಅಲ್ಪಸಂಖ್ಯಾತ / ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದಲೇ ಪ್ರವೇಶಾತಿ ಮಾಡಿಕೊಳ್ಳುವಂತೆ ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ನಿಗಧಿಪಡಿಸಿ ಆದೇಶಿಸಿದೆ. ಮುಂದುವರೆದು ಯಾವ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳು ತಮ್ಮ ಸಂಸ್ಥೆಯ ಅನುದಾನಿತ ಕೋರ್ಸ್‌ಗಳಲ್ಲಿನ ಎಲ್ಲಾ ಸೀಟುಗಳನ್ನು (ಅಂದರೆ ಶೇ. 100 ರಷ್ಟು ಸೀಟುಗಳನ್ನು) ಸರ್ಕಾರಕ್ಕೆ ಬಿಟ್ಟುಕೊಡುತ್ತವೆಯೋ ಅಂತಹ ಸಂಸ್ಥೆಗಳಿಗೆ ಮಾತ್ರ ಶೇ. 100 ರಷ್ಟು ವೇತನಾನುದಾನವನ್ನು ಮಂಜೂರು ಮಾಡಲು ಸರ್ಕಾರವು ಆದೇಶಿಸಿದೆ.

ಉಲ್ಲೇಖ (2) ರಲ್ಲಿ ಮಾಹಿತಿ ನೀಡಲಾದಂತೆ 2015-16 ನೇ ಶೈಕ್ಷಣಿಕ ಸಾಲಿಗೆ ಮತೀಯ ಅಲ್ಪಸಂಖ್ಯಾತ ಸಂಸ್ಥೆಗಳಾದ ಕೆಸಿಟಿ ಪಾಲಿಟೆಕ್ನಿಕ್, ಗುಲ್ಬರ್ಗಾ ಹಾಗೂ ಗೋಮಟೇಶ್ ಪಾಲಿಟೆಕ್ನಿಕ್, ಬೆಳಗಾವಿ ಸಂಸ್ಥೆಯವರು ಒಟ್ಟು ವಿದ್ಯಾರ್ಥಿ ಪ್ರಮಾಣದಲ್ಲಿ ಶೇ. 50 ರಷ್ಟು ಸೀಟುಗಳನ್ನು ಸರ್ಕಾರಿ ಸೀಟುಗಳನ್ನಾಗಿ ಹಾಗೂ ಉಳಿದ ಶೇ. 50 ರಷ್ಟು ಸೀಟುಗಳನ್ನು ಆಡಳಿತ ಮಂಡಳಿಯ ವತಿಯಿಂದ ಭಾಷಾ / ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಭರ್ತಿ ಮಾಡುವಂತೆ ಹಂಚಿಕೆಯನ್ನು ಮಾಡಲಾಗಿದೆ. ಈ ದಿಸೆಯಲ್ಲಿ ಉಲ್ಲೇಖ (1) ರ ಸರ್ಕಾರದ

ಆದೇಶದನ್ವಯ ಕೆಸಿಟಿ ಪಾಲಿಟೆಕ್ನಿಕ್, ಗುಲ್ಬರ್ಗಾ ಹಾಗೂ ಗೋಮಟೇಶ್ ಪಾಲಿಟೆಕ್ನಿಕ್, ಬೆಳಗಾವಿ ಸಂಸ್ಥೆಯ ಅನುದಾನಿತ ಸಿಬ್ಬಂದಿಗಳಿಗೆ 2015-16 ನೇ ಶೈಕ್ಷಣಿಕ ಸಾಲಿನಿಂದ ಅಂದರೆ ಜುಲೈ 2015 ರಿಂದ ವೇತನಾನುದಾನ ಬಿಡುಗಡೆಯಲ್ಲಿ ಸರ್ಕಾರದ ವತಿಯಿಂದ ಶೇ. 85 ರಷ್ಟು ಮತ್ತು ಆಡಳಿತ ಮಂಡಳಿಯ ವತಿಯಿಂದ ಶೇ. 15 ರಷ್ಟನ್ನ ಪಾವತಿಸಬೇಕಾಗಿರುತ್ತದೆ.

ಆದುದರಿಂದ ಜುಲೈ 2015 ರ ಮಾಹೆಯಿಂದ ಕೆಸಿಟಿ ಪಾಲಿಟೆಕ್ನಿಕ್, ಗುಲ್ಬರ್ಗಾ ಹಾಗೂ ಗೋಮಟೇಶ್ ಪಾಲಿಟೆಕ್ನಿಕ್, ಬೆಳಗಾವಿ ಸಂಸ್ಥೆಯ ಸಿಬ್ಬಂದಿಯವರ ಸರ್ಕಾರದ ಪಾಲಿನ ಶೇ. 85 ರಷ್ಟಕ್ಕೆ ಬಿಲ್ಲನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲು ಈ ಮೂಲಕ ಆದೇಶಿಸಲಾಗಿದೆ.

ನಿರ್ದೇಶಕರು.
ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು.

ಇವರಿಗೆ,

1) ಪ್ರಿನ್ಸಿಪಾಲರು, ಕೆ.ಸಿ.ಟಿ ಪಾಲಿಟೆಕ್ನಿಕ್, ಗುಲ್ಬರ್ಗಾ
2) ಪ್ರಿನ್ಸಿಪಾಲರು, ಗೋಮಟೇಶ್ ಪಾಲಿಟೆಕ್ನಿಕ್, ಗುಲ್ಬರ್ಗಾ

ಪ್ರತಿ:

1) ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು- ಮಾಹಿತಿಗಾಗಿ
2) ಲೆಕ್ಕಾಧಿಕಾರಿಗಳು, ನಿರ್ದೇಶನಾಲಯ, ಬೆಂಗಳೂರು
3) ಸಹಾಯಕ ನಿರ್ದೇಶಕರು (ಎಂಪಿಸಿ), ನಿರ್ದೇಶನಾಲಯ, ಬೆಂಗಳೂರು